ಸಮಯವನ್ನು ನಿದ್ರೆಯಲ್ಲಿ ಕಳೆಯುತ್ತಿದ್ದ ಅವನು ಬೆಳಗ್ಗೆ ಕಲಾಸಿಪಾಳ್ಯದಲ್ಲಿ ಬಸ್ಸು ನಿಂತೊಡನೆಯೇ ಯಾರೋ ಗೆಳೆಯನೊಬ್ಬನ ಬೈಕು ಹತ್ತಿಕೊಂಡು ಎತ್ತಲೋ ಹೋಗಿಬಿಡುತ್ತಿದ್ದ. ಮೀಟರ್ ಬಡ್ಡಿ, ಚೀಟಿ, ಸಟ್ಟೇಬಾಜಿ, ವಸೂಲಿಯೇ ಮುಂತಾದ, ತನ್ನ ಒಂದಿಡೀ ಹಗಲನ್ನು ಕಳೆಯಬಲ್ಲ ದಂಧೆಗಳು ಅವನಿಗೆ ತಿಳಿದಿದ್ದವು. ರಾತ್ರಿ ಬಸ್ಸು ಮೆಜಸ್ಟಿಕ್ಕಿಗೆ ತಲುಪಿದ ಐದು ನಿಮಿಷಕ್ಕೆ ಸರಿಯಾಗಿ ಅಂಡರ್‌ಪಾಸಿನೊಳಗಿನ ಕತ್ತಲಿಂದ ನಡೆಯುತ್ತಾ ಪ್ರತ್ಯಕ್ಷವಾಗುತ್ತಿದ್ದವನ ಮುಖದಲ್ಲಿ ಯಾವುದೋ ಸುಖವನ್ನುಂಡ ಸುಸ್ತಿರುತ್ತಿತ್ತು. ಒಮ್ಮೆಯಂತೂ ತನ್ನನ್ನು ಹುಡುಕಿಕೊಂಡು ಬಸ್ಸಿನ ತನಕ ಬಂದಿದ್ದವಳೊಬ್ಬಳನ್ನು ಅವನು ಏನೇನೋ ಹೇಳಿ ಸಾಗಹಾಕಿದ್ದ. ಮೆಜಸ್ಟಿಕ್ಕಿನಾಚೆಯ ನಿಗೂಢ ಬೀದಿಗಳೊಳಗಿನ ಚೆಲುವೆಯರೆಲ್ಲರ ಸಹವಾಸ ಅವನಿಗಿದೆ ಎಂಬುದನ್ನು ಅವನ ಒಂದು ಗುಂಡಿ ತೆರೆದೆದೆಗೆ ಅಂಟಿಕೊಂಡ ಬಿಂದಿ, ಭುಜಕ್ಕೆ ಸಿಕ್ಕಿ ಬಿದ್ದ ಉದ್ದ ಕೂದಲುಗಳು ಸಾಬೀತು ಮಾಡುತ್ತಿದ್ದವು. ಅದರ ಬಗ್ಗೆ ಕೇಳಿದಾಗ 'ಜಿಂದಗೀ ಮೇ ಸಬ್ಕುಚ್ ದೇಖ್ಲಿಯಾ ಭಾಯ್. ಪ್ರೀತಿ, ದ್ವೇಷ, ಮೊಹಬ್ಬತ್, ದಂಧಾ, ಪೈಸಾ, ರೌಡೀಸ್ಸಂ... ಎಲ್ಲಾ ನೋಡಿ ಆಯ್ತು. ನನ್ನ ತಂಗೀದೊಂದು ಮದ್ವೆ ಆದ್ರೆ ಮತ್ತೆ ಯಾವುದರ ಕಡೇನೂ ತಲೇನೇ ಹಾಕಲ್ಲ, ತುಮ್ಹಾರೀ ಖುದಾಕೀ ಕಸಂ' ಎಂದಿದ್ದ.

ಉಳಿದೆಲ್ಲರನ್ನೂ ಬದುಕಿಗೆ, ಅದರ ಧಾವಂತಗಳಿಗೆ, ಒಪ್ಪಂದ-ನಂಬಿಕೆಗಳಿಗೆ ಹಿಡಿದು ಕಟ್ಟಿರುವ ಯಾವುದೋ ಒಂದು ಸಹಜ ತಂತು ಇವನೆದೆಯಿಂದ ಉಳುಚಿಹೋಗಿದೆ ಎಂದು ಜಬ್ಬರನಿಗೆ ಬಲವಾಗಿ ಅನ್ನಿಸುತ್ತಿತ್ತು. ಅರವಿಂದನಾದರೂ ಅದಕ್ಕೆ ತಕ್ಕನಾಗಿ ವರ್ತಿಸುತ್ತಿದ್ದ. ಸಾಗರದ ಹಾಸ್ಟೆಲ್‌ನಲ್ಲಿರುವ ತಂಗಿ ಮನೆಗೆ ಬಂದಾಗ ಮಾತ್ರ ತಾನೂ ಮನೆಗೆ ಹೋಗುತ್ತಿದ್ದ. ಉಳಿದ ದಿನಗಳಲ್ಲಿ ಜಬ್ಬರನ ಮನೆಯಲ್ಲೇ ಇದ್ದುಬಿಡುತ್ತಿದ್ದ. ಅವನ ಕೈಯಿಂದ ಬಿರಿಯಾನಿಯ ತಟ್ಟೆ ಕಸಿದುಕೊಂಡು, 'ಭಾಭೀ, ಜಬ್ಬಣ್ಣನಿಗೊಂದು ಪ್ಲೇಟ್ ತಿಳಿ ಗಂಜಿ ಮತ್ತು ಮೂರು ಪೀಸ್ ಸೌತೇಕಾಯಿ' ಎಂದು ಗಹಗಹಿಸಿ ನಗುತ್ತಿದ್ದ. ಪುಟ್ಟ ಆಸೀಫನನ್ನು ಹೇಳದೇ ಕೇಳದೇ ಎತ್ತಿಕೊಂಡು ತೀರ್ಥಹಳ್ಳಿ ಜಾತ್ರೆಗೆ ಒಯ್ದಿದ್ದ. 'ಕ್ಯಾಬೇ, ಒಂದು ವಾರ ಆಯ್ತು. ಮನೆಗೆ ಹೋಗಲ್ವಾ?' ಎಂದು ಕೇಳಿದರೆ ಸಿಟ್ರೆಂದು ಉರಿದುಕೊಂಡು 'ಅರೆ ಓ ಜಬ್ಬಣ್ಣ, ಬೇಕಾದರೆ ಪೈಸಾ ತಗೋ. ಅದೂ ಬೇಡ ಅಂದ್ರೆ ನಾನು ಬೇರೆ ಮನೆ ನೋಡ್ಕೋತೀನಿ. ಆದ್ರೆ ನನಗೆ ಸಂಬಂಧವಿಲ್ಲದ ಜಾಗಕ್ಕೆ ಹೋಗು ಅನ್ಬೇಡ' ಎಂದು ಐನೂರರ ನೋಟೆರಡು ತೆಗೆದು ಕೊಟ್ಟೇ ಬಿಟ್ಟಿದ್ದ.

ಇಂತಿಪ್ಪ ಅರವಿಂದ ತಂಗಿಯ ಮದುವೆ ನಿಕ್ಕಿಯಾದ ದಿನದಿಂದ ಅಚ್ಚರಿಯೆಬಂತೆ ಬದಲಾದ. ಜವಾಬ್ದಾರಿಯುತ ಅಣ್ಣನಂತೆ ಕೆಲಸ ಮಾಡಿದ. ಎಲ್ಲೆಲ್ಲೋ ಚೀಟಿ ಎತ್ತಿ, ಯಾ ರ್‍ಯಾರದೋ ಕತ್ತು ಪಟ್ಟಿ ಹಿಡಿದು ವಸೂಲಿ ಮಾಡಿಸಿ, ಮತ್ತೆಲ್ಲೋ ಬೆಟ್ಟಿಂಗ್ ಕಟ್ಟಿ, ಎಲ್ಲೆಲ್ಲಿಂದಲೋ ಹಣ ತಂದು ಧೂಂ ಧಾಂ ಎಂದು ಮದುವೆ ಮಾಡಿಯೂ ಬಿಟ್ಟ. ಮದುವೆಗಿನ್ನೂ ಮೂರು ದಿನ ಇರುವ ದಿನ ರಾತ್ರಿ ಜಬ್ಬರನ ಮನೆಯಂಗಳದಲ್ಲಿ ಆಸೀಫನ ಕೈ ಹಿಡಿದುಕೊಂಡು, 'ಅರವಿಂದ ಪೀಪಿ ಊದುವ, ಅರವಿಂದ ಢೋಲು ಬಡಿಯುವ, ಅರವಿಂದ ಹಾಡು ಹಾಡುವ, ಜನರೆಲ್ಲ ಸೇರಿ ಹರಸುವ, ನನ್ನ ತಂಗಿಯ ಮದುವೆ... ಬಲು ಜೋರು ಜೋರು ಜೋರು' ಎಂದು ಅಂಗಳದ ತುಂಬಾ ಕುಣಿದಿದ್ದ. ಅಲ್ಲಿಯ ತನಕ ಇದ್ದ ಸಣ್ಣ ಶಿಷ್ಟಾಚಾರವನ್ನೂ ಮೀರಿ ಜಬ್ಬರ್-ಖತೀಜಾ ಭಾಭಿಯರ ಕೈಯನ್ನೂ ಹಿಡಿದುಕೊಂಡು ಕುಣಿದೇ ಕುಣಿದಿದ್ದ.

ಮದುವೆ ಮುಗಿದ ಮೇಲೆ ಅರವಿಂದ ಮತ್ತೆ ಮನೆಯತ್ತ ತಲೆಯೇ ಹಾಕಿರಲಿಲ್ಲ. ಎಲ್ಲೋ ಎರಡ್ಮೂರು ವಾರಕ್ಕೊಮ್ಮೆ ತಂಗಿಯ ಮನೆಗೆ ಹೋಗಿ ಬರುತ್ತಿದ್ದ. ಉಳಿದಂತೆ ಅವನ ಹಗಲು-ರಾತ್ರಿಗಳೆಲ್ಲ ಶಿವಶಕ್ತಿ ಬಸ್ಸಿಗೆ, ಜಬ್ಬರನ ಪ್ಲಾಸ್ಟಿಕ್ ಅಂಗಡಿಗೆ ಹಾಗೂ ಮೆಜಸ್ಟಿಕ್ಕಿನ ನಿಗೂಢ ಗಲ್ಲಿಗಳಿಗೆ ಸಂದುಹೋಗಿದ್ದವು. ಅಂದು ಹುಡುಕಿಕೊಂಡು ಬಂದಿದ್ದ ಹುಡುಗಿಯನ್ನು ತಂದು ಎದುರಿಗೆ ನಿಲ್ಲಿಸಿ, 'ಇವ್ರು ಜಬ್ಬಣ್ಣ. ಮೇರಾ ಬಡಾ ಭಾಯಿ' ಎಂದು ಪರಿಚಯಿಸಿದ್ದ. ಅವಳಾದರೂ ಎರಡೂ ಕೈ ಮುಗಿದು ನಮಸ್ತೇ ಎಂದಿದ್ದಳು. 'ಜಬ್ಬಣ್ಣ, ಯೇ ಹಮಾರಾ ಪರಿಂದಾ' ಎಂದು ಕಣ್ಣುಹೊಡೆದು, ಅವಳ ಹೆಗಲು ತಬ್ಬಿದವನೇ ಕಲಾಸೀಪಾಳ್ಯದ ಗಲ್ಲಿಯೊಂದರೊಳಕ್ಕೆ ನಡೆಯುತ್ತಾ ಮರೆಯಾಗಿದ್ದ.

ಹೀಗೆ ಬದುಕಿನ ಸಮಸ್ತ ಅನಿಷ್ಟಗಳನ್ನೂ ಮೆಟ್ಟಿ ನಿಂತಿದ್ದ ಅರವಿಂದನ ಬಾಳಿನಲ್ಲಿ ಮಲ್ಲಿಗೆಯ ಬಳ್ಳಿಯೊಂದು ಆಗಷ್ಟೇ ಚಿಗುರುತ್ತಾ ಹಬ್ಬುತ್ತಿರುವ